**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ**
**CC.No. 851/2021**
**CW : 01 PW: 1**
**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 14.07.2026**

ಮುಂದುವರೆದ ಮುಖ್ಯ ವಿಚಾರಣೆ : **ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನಮ್ಮ ಮತ್ತು ಆರೋಪಿತರ ಮಧ್ಯೆ ಬಾಯಿ ಮಾತಿನ ಜಗಳವಾಗಿರುತ್ತದೆ. ಈ ವಿಚಾರವಾಗಿ ನಾನು ಪೋಲಿಸ ಠಾಣೆಗೆ ಹೊದಾಗ ಪೋಲಿಸರು ನಿಪಿ.1 ರ ಮೇಲೆ ಸಹಿ ಪಡೆದಿದ್ದರು, ಸದಿರಿ ವಿಚಾರವನ್ನು ಹೊರತುಪಡಿಸಿ ನನಗೆ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ. ಆರೋಪಿತರು ನನಗೆ ನೀರಿನ ವಿಚಾರವಾಗಿ ಬೈಯಿದಿರುವುದಿಲ್ಲ, ಹೊಡೆದಿರುವುದಿಲ್ಲ ಮತ್ತು ಹಲ್ಲೆ ಮಾಡಿರುವುದಿಲ್ಲ ಹಾಗೂ ಜೀವ ಬೆದರಿಕೆ ಹಾಕಿರುವುದಿಲ್ಲ. ನಾನು ಪೊಲಿಸರ ಮುಂದೆ ನನ್ನ ಪುರವಣಿ ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ದಿನಾಂಕ 12.02.2021 ರಂದು ಮಧ್ಯಾಹ್ನ 2.30 ಕ್ಕೆ ನಾನು ನಮ್ಮ ಮನೆಯ ಹತ್ತಿರ ನಿರಿನ ನಳದ ಪೈಪುಗಳ ಹಾಕುವ ಕೆಲಸ ಮಾಡ್ತುದ್ದಾಗ, 1 ರಿಂದ 4 ನೇ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು, ನನ್ನ ಎದೆಯ ಮೇಲಿನ ಅಂಗಿಯನ್ನು ಹಿಡಿದು, ಕೈಯಿಂದ ಕಪಾಳಕ್ಕೆ ಹೊಡದು, ಕಾಲಕಿನಿಂದ ಒದ್ದಿರುತ್ತಾರೆ ಎಂದರೆ ಸರಿಯಲ್ಲ.ಈ ಸಮಯದಲ್ಲಿ ಚಾಸಾ-4 ರಿಂದ 6 ರವರು ಜಗಳ ಬಿಡಿಸುವಾಗ, ಆರೋಪಿತರೆಲ್ಲರೂ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ನಾನು ನಿಪಿ.1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ದಿನಾಂಕ 22.02.2021 ರಂದು ಈಗ ಓದಿ ಹೇಳಿದಂತೆ ನನ್ನ ಪುರವಣಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಪುರವಣಿ ಹೇಳಿಕೆಯನ್ನು ನಿಪಿ.2 ಎಂದು ಗುರುತಿಸಲಾಯಿತು. ನಾನು ದಿನಾಂಕ 27.06.2025 ರಂದು ಸಾಕ್ಷಿ ನುಡಿದಿದ್ದು, ಸದರಿ ಸಾಕ್ಷಿಯು ನಿಜ ಇರುತ್ತದೆಯೋ ಈ ದಿನ ನುಡಿದ ಸಾಕ್ಷಿಯು ನಿಜ ಇುತ್ತದೆಯೂ ಎಂದರೆ ಸಾಕ್ಷಿಯು ಈ ದಿನ ನುಡಿದ ಸಾಕ್ಷಿ ನಿಜ ಇರುತ್ತದೆ ಎಂದು ನುಡಿಯುತ್ತಾರೆ. ಆರೋಪಿತರೊಂದಿಗೆ ನಾವು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಿಪಿ.1 ಮತ್ತು 2 ರಲ್ಲಿರುವ ವಿಚಾರಗಳು ನನಗೆ ಗೊತ್ತಿದ್ದರು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ</u>**

ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲು ಏನೂ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ : ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**